# ಕಂನುಡಿ – ಕನ್ನಡಕ್ಕೆ ಒಂದು ನಿದರ್ಶಕ ಪದ ಸಂಪಾದಕ

## (OPOK! ಮತ್ತು OHOK! ನಿಯಮ ಮತ್ತು ನೆಲೆ-ತಿಳಿವುಗಳ ಆಧಾರದ ಮೇಲೆ)

ವಿಶ್ವೇಶ್ವರ ವಿ. ದೀಕ್ಷಿತ

ಕ್ರಿಯಾ - ಅಮೆರಿಕದ ಕನ್ನಡ ಸಂಶೋಧನಾ ಸಂಸ್ಥೆ

KRIA – Kannada Research Institute of America
714-322-9748 namovish@kannadakali.com; namovish@gmail.com

## ತಿರುಳು

ಕಂನುಡಿ, OPOK! ಮತ್ತು OHOK! ನಿಯಮಗಳನ್ನು ಆಧರಿಸಿ ಮತ್ತು ನೆಲೆ–ತಿಳಿವನ್ನು ಒಳಗೊಂಡು ರಚಿತವಾದ ಒಂದು ನಿದರ್ಶಕ ಪತ್ಯ ಸಂಪಾದಕ. ಕನ್ನಡಕ್ಕೆ OHOK!, ಅಂದರೆ Ottu Haku Ottu Koḍu! (ಒತ್ತು ಹಾಕು ಒತ್ತು ಕೊಡು), ಎನ್ನುವ ಒಂದು ಊಡುಬಳಿಯನ್ನು ಎತ್ತಿ ತೋರಿಸುತ್ತಿದೆ. ಒತ್ತಡ ಗ್ರಹಿಸಬಲ್ಲ ಸೂಕ್ಷ್ಮ ಇನ್‌ಪುಟ್ ಸಾಧನಗಳಿಗೆ ಇದು ವಿಶೇಷವಾಗಿ ಸೂಕ್ತವಾಗಿದೆಯಾದರೂ, ಪ್ರಸ್ತುತ ಆನ್‌ಲೈನ್ ಅನುಷ್ಠಾನವು ಸಾಮಾನ್ಯ ಯಾಂತ್ರಿಕ ಕೀಬೋರ್ಡ್ ಅನ್ನು ಬಳಸುತ್ತದೆ. OHOK! ಮೂರು ಸಂಭಾವ್ಯ ಬಗೆಗಳನ್ನು ಹೊಂದಿದೆ – ಸ್ವ–ಒತ್ತು (ದ್ವಿತ್ವ), ಕಂಡಂತೆ, ಮತ್ತು ಅಂದಂತೆ. ಕಂಡಂತೆ ಬಗೆ ಉಲಿಮಿಕ ಕ್ರಮವನ್ನು ಅನುಸರಿಸುವುದಿಲ್ಲ ಎಂದು ಗಮನಿಸಬಹುದು. ಆದಾಗ್ಯೂ, ಉಲಿಮೆಗಳನ್ನು ಒಳದಿನಿಸುವ ಬದಲು ಟೈಪಿಸಿದಂತೆ ಕಾಣುವ ಒಲವು ಹೊಂದಿರುವವರಿಗೆ ಈ ಬಗೆ ಉತ್ತಮವಾಗಿ ಕಾರ್ಯನಿರ್ವಹಿಸಬಹುದು.

ವೇಗ, ನಿಖರತೆ, ಮತ್ತು ಬಳಸುಗ ಸ್ನೇಹಪರತೆಯನ್ನು ಸಮರ್ಥವಾಗಿ ಹೆಚ್ಚಿಸಲು ನೆಲೆ–ತಿಳಿವನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಬಹುದು ಎಂಬುದನ್ನು ಸಹ ಕಂನುಡಿ ತೋರಿಸಿ ಕೊಡುತ್ತದೆ. ಉದಾಹರಣೆಗೆ, ಊಹಿತ ಸ್ವರ ಆಯ್ಕೆ, ಸ್ವಯಂಚಾಲಿತ ಶೂನ್ಯೀಕರಣ ಮತ್ತು ಆರ್ಕೀಕರಣ. ಕನ್ನಡದಂತಹ ಉಲಿ–ಉಲಿಗಟ್ಟಿನ ಭಾಷೆಗಳಿಗೆ ಅಗತ್ಯವಾದ ನಾಲ್ಕು ರೀತಿಯ ಅಳಿಸುಗಳನ್ನು ಸಹ ಅಳವಡಿಸಲಾಗಿದೆ.

ಕಂನುಡಿ ಇಲ್ಲಿ ಲಭ್ಯ:

https://kannadakali.com/kannudi/kannudi.html

## ೧ ಪರಿಚಯ

ಕನ್ನಡ ಮತ್ತು ಇತರ ಭಾರತೀಯ ಭಾಷೆಗಳ ಪತ್ಯವನ್ನು ಗಣಕಕ್ಕೆ ಸೇರಿಸಲು ಹಲವು ಊಡುಬಳಿ ಸಂಪಾದಕಗಳು (IME – Input Method Editor), ಮತ್ತು ನಿಜ ಕಾಲ ಲಿಪ್ಯಂತರಣ ಪರಿಕರಗಳು, ಉಚಿತ ಮತ್ತು ವಾಣಿಜ್ಯ ಉಪಕರಣಗಳು, ಆನ್‌ಲೈನ್ ಮತ್ತು ಆಫ್‌ಲೈನ್‌ಗಳಲ್ಲಿ ದೊರಕುತ್ತವೆ. ಇವುಗಳಲ್ಲಿ ಹೆಚ್ಚಿನವು ನಿರ್ವಿಶೇಷವಾದವುಗಳು, ಅಂದರೆ ಅವುಗಳನ್ನು ಎಲ್ಲ ಭಾರತೀಯ ಭಾಷೆಗಳಿಗೂ ಅನ್ವಯಿಸುವಂತೆ ರಚಿಸಲಾಗಿವೆ. ಈ ಭಾಷೆಗಳ ಲಿಪಿಗಳು ಬ್ರಾಹ್ಮಿ ಲಿಪಿ ಒಂದರಿಂದೇ ಹುಟ್ಟಿ, ಉಲಿ–ಉಲಿಗಟ್ಟಿನಂತಹ ಅನೇಕ ಸಾಮಾನ್ಯ ಲಕ್ಷಣಗಳನ್ನು ಹೊಂದಿರುವುದರಿಂದ ಒಂದು ಸಾಮಾನ್ಯ ರಚನೆ ಸರಿ ಎನಿಸುತ್ತದೆ. ಆದರೂ, ಈ ಭಾಷೆಗಳ ಬರವಣಿಗೆಯ ಶೈಲಿಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳಿವೆ. ಪದ ಸಂಪಾದಕ ಮತ್ತು ಊಡುಬಳಿ ಸಂಪಾದಕಗಳನ್ನು (IME) ಹೆಚ್ಚು ಪರಿಣಾಮಕಾರಿ ಮತ್ತು ಬಳಸುಗ ಸ್ನೇಹಿಯಾಗಿ ಮಾಡಲು ಇಂತಹ ಭಾಷೆ–ಲಿಪಿಗಳ ವಿಶೇಷತೆಗಳನ್ನು ಬಳಸಬಹುದು. ನೆಲೆ-ತಿಳಿವು ಬಳಸಿದ ಸಂಪಾದಕದ ಅತಿ ಮುಂಚಿನ ಅನುಷ್ಠಾನವನ್ನು ದೀಕ್ಷಿತ್ [೧] [೨] [೩] ವಿವರಿಸಿದ್ದಾರೆ. ಇದು ಎಲ್ಲ ಭಾಷೆಗಳ ಚೌಕಟ್ಟನ್ನು ಗುರಿಯಾಗಿಟ್ಟುಕೊಂಡ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿತ್ತು. ಶೂನ್ಯೀಕರಣ ಮತ್ತು ಅನಾರಂಭಿಕ ಸ್ವರಗಳಂತಹ ಕಲ್ಪನೆಗಳನ್ನು ಗುರುತಿಸಿದೆ ಮತ್ತು ಧ್ವನಿ ಊಡುಗೆಗೆ ಒಂದು ಸುಳಿವು ಕೂಡ ನೀಡಿದೆ. ಆದರೂ, ಅನುಷ್ಠಾನವು ಕನ್ನಡಕ್ಕೆ ಸೀಮಿತವಾಗಿತ್ತು ಮತ್ತು ಕೆಲವೆ ವಿಶೇಷ ಲಕ್ಷಣಗಳನ್ನು ಹೊಂದಿತ್ತು. ಇದು DOS ಆಧಾರಿತ ಸಂಪಾದಕವಾಗಿದ್ದು ನಂತರ ವಿಂಡೋಸ್ ಅಥವಾ ಇತರ ತಂತ್ರಕಟ್ಟೆಗಳಲ್ಲಿ ಯಾವುದೇ ಆವೃತ್ತಿಗಳ ಬಿಡುಗಡೆ ಆಗಿಲ್ಲ. ವಿಜುವಲ್ ಬೇಸಿಕ್(Visual

Basic)ನಲ್ಲಿ ರಂಗಾಚಾರ್ [೪] ಅಭಿವೃದ್ಧಿಪಡಿಸಿದ್ದ ಮತ್ತೊಂದು DOS ಸಂಪಾದಕ ಗಮನಾರ್ಹ ಆಗಿತ್ತು.

ಈ ಲೇಖನದಲ್ಲಿ ಚಿತ್ರಗುಪ್ತ ಮತ್ತು ಯುನಿವೆಡ್ [೧] [೨] ಗಳಲ್ಲಿನ ಹಿಂದಿನ ಹೊಳವುಗಳನ್ನು ಅಳವಡಿಸಿಕೊಂಡು ಒತ್ತಕ್ಷರಕ್ಕೆ ಹೊಸ ಊಡುಬಳಿಯನ್ನು ಪರಿಚಯಿಸಲು ರೂಪಿಸಿದ ***ಕಂನುಡಿ*** ಎನ್ನುವ ನಿದರ್ಶಕ ಪದ ಸಂಪಾದಕವನ್ನು ವಿವರಿಸಿದೆ.

# ೨ ಊಡುಬಳಿಗಳು

## ೨.೧ ಕೀ–ಮಣೆ

ಕೀ–ಮಣೆಯ ಬಳಕೆ, ರೂಢಿಗತ ಆಗಿರುವುದರಿಂದ, ಒಂದು ಅವಶ್ಯಕ ವಿಧಾನವಾಗಿದೆ. ಉಲಿಮಿಕ ಊಡುಬಳಿಯಲ್ಲಿ ಸಾಮಾನ್ಯವಾಗಿ ಒಂದು ಕೀ–ಗೆ ಒಂದು ಉಲಿಮೆ, ಒಂದು ಉಲಿಮೆಗೆ ಒಂದು ಕೀ–ಅನ್ನು ನಿಯೋಜಿಸಲಾಗುತ್ತದೆ ಮತ್ತು ಕೀ–ಗಳನ್ನು ಉಚ್ಚಾರಣೆಯ ಕ್ರಮದಲ್ಲಿ ಒತ್ತಲಾಗುತ್ತದೆ. ಕಟ್ಟುನಿಟ್ಟಾಗಿ ಒಂದು ಉಲಿಗೆ ಒಂದು ಕೀ ಅಂತೆ ಕೀ–ಗಳನ್ನು ಉಲಿಮೆಗಳಿಗೆ ಹೊಂದಿಸುವುದು ಅನುಕೂಲಕ್ಕಾಗಿ ಅಪೇಕ್ಷಣೀಯವಾಗದಿರಬಹುದು. ಕನ್ನಡವನ್ನು ಲ್ಯಾಟಿನ್ ಲಿಪಿಯಲ್ಲಿ ಸಾಮಾನ್ಯವಾಗಿ ಬರೆಯುವ ಕ್ರಮವನ್ನು ಅನುಸರಿಸಿ, ಅನುಕೂಲಕ್ಕಾಗಿ, ಕೆಲವರು ಒಂದೇ ಉಲಿಗೆ ೧–೩ ಕೀ–ಗಳನ್ನು ನಿಗದಿಸಬಹುದು. ಉದಾಹರಣೆಗೆ, ಭ (ಮಹಾಪ್ರಾಣ) ಕ್ಕೆ *B, bh, Bh,* ಅಥವ *BH* ಅನ್ನು ನಿಯೋಜಿಸಬಹುದು.

ಕನ್ನಡ ಗಣಕ ಪರಿಷತ್ತು (KGP) ಅಭಿವೃದ್ಧಿಪಡಿಸಿದ ನುಡಿ ಸಂಪಾದಕದಲ್ಲಿ ಬಳಸಲಾದ (ASCII) ಕೀ–ಗಳಿಗೆ ಅಕ್ಷರಗಳ ನಿಯೋಜನೆಯನ್ನು [೫] ಕರ್ನಾಟಕ ಸರ್ಕಾರ ಅಧಿಕೃತ ಎಂದು ಗೊತ್ತುಪಡಿಸಿದೆ [೬].

ರಾಠೋಡ್ ಮತ್ತಿತರರು [೭] ಸಾಂದರ್ಭಿಕ ಸಕ್ರಿಯ ಕೀ–ಮಣೆಯನ್ನು ಆಧಾರ ಸಹಿತ ಮಂಡಿಸಿದ್ದಾರೆ.

## ೨.೨ ಕೈ ಬರಹ

ಟ್ಯಾಬ್ಲೆಟ್ ಅಥವಾ ಮೊಬೈಲ್ ಪರದೆಯಲ್ಲಿ ಸ್ಟೈಲಸ್ ಅನ್ನು ಬಳಸುವುದು, ಊಡುಗೆಯ ಇನ್ನೊಂದು ವಿಧಾನವಾಗಿದೆ. ಚಿತ್ರ ಸಂಸ್ಕರಣೆಯ ಸಂಕೀರ್ಣತೆಯಿಂದ ಅದು ನಿಧಾನವಾಗುವುದು ಸಹಜ. ವೈಯಕ್ತಿಕ ಬರವಣಿಗೆಯ ಶೈಲಿಗಳಲ್ಲಿನ ವ್ಯತ್ಯಾಸಗಳು ಸಹ ದೋಷಗಳಿಗೆ ಕಾರಣವಾಗುತ್ತವೆ. ಈ ದೋಷಗಳನ್ನು ಸರಿಪಡಿಸಲು ಹೆಚ್ಚಿನ ಸಮಯ ತೆಗೆದುಕೊಳ್ಳುವುದಲ್ಲದೆ, ವೇಗವನ್ನು ಕಡಿಮೆ ಮಾಡಿ ಲಿಪಿಕಾರನ ಆಲೋಚನಾ ಪ್ರಕ್ರಿಯೆಗೆ ಅಡ್ಡಿ ಆಗುತ್ತದೆ.

## ೨.೩ ದನಿ ಊಡುಗೆ

ದನಿ ಊಡುಗೆ ಒಂದು ಭರವಸೆಯ ವಿಧಾನವಾಗಿದೆ. ಆದರೂ, ದನಿ ಗುರುತಿಸುವಿಕೆಯ ತಂತ್ರಾಂಶಗಳು ಪರಿಪಕ್ವವಾಗಿಲ್ಲ. ಇದು, ವಿಶೇಷವಾಗಿ ಕನ್ನಡದಲ್ಲಿ, ಪ್ರಾದೇಶಿಕ ಮತ್ತು ಉಚ್ಚಾರಣೆಯಲ್ಲಿನ ಇತರ ವ್ಯತ್ಯಾಸಗಳು ಹೇರಳವಾಗಿರುವುದರಿಂದ ಸಮಸ್ಯಾತ್ಮಕವಾಗಿದೆ. ಪ್ರಸ್ತುತ ಅನುಷ್ಠಾನಗಳು ಹೆಚ್ಚಾಗಿ ಗ್ರಾಂಥಿಕ ನಿಘಂಟು ಆಧಾರಿತವಾಗಿರುವುದರಿಂದ ಇಂತಹ ವ್ಯತ್ಯಾಸಗಳನ್ನು ಸರಿಯೋ ತಪ್ಪೋ ಎಂದು ಗುರುತಿಸವಲ್ಲಿ ಅಸಮರ್ಥವಾಗುತ್ತವೆ. ಹೀಗೆ ದನಿ ಊಡುಗೆ ವಿಧಾನಗಳು, ಎಲ್ಲ ಭಾರತೀಯ ಭಾಷೆಗಳೊಂದಿಗೆ, ಒಂದೆ ರೀತಿಯ ತೊಂದರೆಗಳನ್ನು ಎದುರಿಸುತ್ತಿವೆ, ಅವು ಉಚ್ಚಾರಣೆಯಲ್ಲಿನ ವ್ಯತ್ಯಾಸಗಳು, ನಿಘಂಟಿನ ಮಿತಿ, ಮತ್ತು ಅನವಶ್ಯಕ ತಿದ್ದುಪಡಿಗಳು.

ಪ್ರಸ್ತುತ ದನಿ ಊಡುಗೆ ಅನುಷ್ಠಾನಗಳು ಟೈಪಿಸಲು ಹೆಚ್ಚು ಕಷ್ಟಕರ ಎನಿಸುತ್ತವೆ. ಟೈಪಿಸುತ್ತಿರುವ ಪದಗಳನ್ನು ನಿರಂತರವಾಗಿ ನೋಡುತ್ತಿರಬೇಕು; ಆಯ್ಕೆಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕು; ಅಥವಾ ತಿದ್ದುಪಡಿಯನ್ನು ತಿದ್ದಬೇಕು. ನಿಘಂಟಿನ ಪದಗಳನ್ನು 'ತಿದ್ದು' ವಲ್ಲಿ ಗಮನಾರ್ಹ ಸಮಯವನ್ನು ಬಳಸುಗನು ಕಳೆಯುವಂತೆ ತೋರುತ್ತಿದೆ; ಮತ್ತು ಅಂತಿಮವಾಗಿ, ನಿರಾಶೆಗೊಂಡು, ಇನ್‌ಸ್ಕ್ರಿಪ್ಟ್ ದಂತಹ **ನೇರ** ಕೀ–ಮಣೆ ವಿನ್ಯಾಸಕ್ಕೆ ಮೊರೆ ಹೋಗುತ್ತಾನೆ. ಹೀಗಾಗಿ, ದನಿ ಊಡುಗೆ ಅದ್ಭುತ ಎನಿಸಿದರೂ, ಪ್ರಸ್ತುತ ಅನುಷ್ಠಾನಗಳು ನಿಖರತೆ ಮತ್ತು ವೇಗ ಎರಡರಲ್ಲೂ ಬಳಸುಗರನ್ನು ವಿಫಲಗೊಳಿಸುತ್ತವೆ.

# ೩ ಸುಧಾರಣೆಗೆ ಅವಕಾಶಗಳು

ಯಾವುದೇ ಊಡುಬಳಿಯಲ್ಲಿ ಮೂರು ಪ್ರಮುಖ ಪರಿಗಣನೆಗಳೆಂದರೆ ನಿಖರತೆ, ವೇಗ ಮತ್ತು ಅನುಕೂಲತೆ. ಈ ಮೂರರ ನಡುವಣ ಸೂಕ್ತ ವಿನಿಮಯ ಕೂಡ ಯೋಚಿಸಬೇಕಾದುದು. ತಿದ್ದುಪಡಿಗಳ ನಿರ್ಮೂಲನೆ ಅಥವಾ ಕಡಿಮೆಗೊಳಿಸುವಿಕೆ (ಹಿಂದಳಿಸು ಮತ್ತು ಅಳಿಸುವಿಕೆಗಳು) ಮತ್ತು ಅಗತ್ಯವಿರುವ ಕೀ–ಒತ್ತುಗಳನ್ನು ಕಡಿಮೆಗೊಳಿಸುವುದು ಪ್ರಮುಖ ಅಳತೆಯಂಕಗಳಾಗಿವೆ. ನಿಸ್ಸಂಶಯವಾಗಿ, ಈ ನಿಟ್ಟಿನಲ್ಲಿ ಪ್ರಸ್ತುತ ವಿಧಾನಗಳನ್ನು ಸುಧಾರಿಸುವ ಅವಶ್ಯಕತೆ ಮತ್ತು ಅವಕಾಶ ಇವೆ.

ಪ್ರಸ್ತುತ ಅಳವಡಿಕೆಗಳು ಎಲ್ಲಾ ಭಾರತೀಯ ಭಾಷೆಗಳನ್ನು ಪೂರೈಸುವ ಗುರಿಯನ್ನು ಹೊಂದಿ, ಅವುಗಳಲ್ಲಿನ ಅದರಲ್ಲಿ ಕನಿಷ್ಠ ಸಾಮಾನ್ಯತೆಗೆ ಬಲಿಯಾಗುತ್ತವೆ. ಅಂತೆ, ಕನಿಷ್ಠ ಉಪಯುಕ್ತವಾಗುತ್ತವೆ, ಏಕೆಂದರೆ ಯಾ ಒಬ್ಬ ಬಳಕೆದಾರನೂ ೨೦+ ಭಾಷೆಗಳಲ್ಲಿ ಆಸಕ್ತಿ ಹೊಂದಿಲ್ಲ. ಆದ್ದರಿಂದ, ಪ್ರತಿ ಭಾಷೆ ಮತ್ತು ಲಿಪಿಗೆ ನಿರ್ದಿಷ್ಟವಾದ ನೆಲೆ-ತಿಳಿವನ್ನು ಬಳಸಿಕೊಳ್ಳಲು ಅನುಷ್ಠಾನಗಳು ಬೆಳೆಸುವಂತಿರಬೇಕು.

ಮೊಬೈಲ್ ತಂತ್ರಕಟ್ಟೆಗಳು ಮೃದುವಾದ ಕೀ-ಮಣೆ, ಸಾಂದರ್ಭಿಕ ಕೀ ಮಣೆ, ಮತ್ತು ಬೆರಳ್ಸವರಿಕೆಗಳಂತಹ ಹೊಸ ಊಡುಬಳಿಗಳನ್ನು ಹೊಂದಿದ್ದು ಆಸಕ್ತಿದಾಯಕ ಅವಕಾಶಗಳನ್ನು ಒದಗಿಸುತ್ತವೆ.

## ೪ ಅಕ್ಷರ ಆವರ್ತನಗಳು

ಒಂದು ಸಾಮಾನ್ಯ ಕನ್ನಡ ಕಡತದಲ್ಲಿ ೩೬% ಮೂಲ ಅಕ್ಷರಗಳು (ಸ್ವರ ಅಥವಾ ವ್ಯಂಜನ+ಅ) ಮತ್ತು ೧೪% ಸಂಯುಕ್ತಾಕ್ಷರಗಳು ದೊರಕುತ್ತವೆ ಎಂದು ಹಿಂದಿನ ಅಧ್ಯಯನಗಳು ಹೇಳಿವೆ. ಕನ್ನಡ ವಿಕಿಪೀಡಿಯ [೮] ಮತ್ತು ಕನ್ನಡ ಕಲಿ [೯] ಲೇಖನಗಳನ್ನು ಬಳಸಿಕೊಂಡಾಗ, ಕೋಷ್ಟಕ ೧ ರಲ್ಲಿ ತೋರಿಸಿರುವಂತೆ ಕನ್ನಡ ಅಕ್ಷರ ಆವರ್ತನಗಳು ಕಂಡುಬಂದವು.

| | |
|---|---|
| *ಮೂಲ ಅಕ್ಷರ* | ೪೨.೪% |
| *ಗುಣಿತಾಕ್ಷರ* | ೩೯.೩% |
| ಅನುಸ್ವಾರ / ಸೊನ್ನೆ / ಶೂನ್ಯ | ೫.೬% |
| *ಒತ್ತು ಮತ್ತು ಅಂತ್ಯ ವಿರಾಮ* | ೧೮.೨% |
| *ಸಜಾತಿ/ದ್ವಿತ್ವ (ಸ್ವ-ಸಂಯುಕ್ತಾಕ್ಷರ)* | ೮.೭% |
| *ಸ್ವರ ನಂತರದ ದ್ವಿತ್ವ* | ೧.೧% |
| *ವಿಜಾತಿ (ಸಂಯುಕ್ತಾಕ್ಷರ)* | ೮.೮% |
| *ಅಂತ್ಯ-ವಿರಾಮ* | ೦.೭% |

ಕೋಷ್ಟಕ ೧: ಅಕ್ಷರ ಆವರ್ತನಗಳು

## ೫ ಕಂನುಡಿ

ಕಂನುಡಿ [೧೦] ಹಲವಾರು ನವೀನ ಮತ್ತು ಪ್ರಾಯೋಗಿಕ ವೈಶಿಷ್ಟ್ಯಗಳನ್ನು ಪರಿಚಯಿಸುವ ಒಂದು ನಿದರ್ಶಕ ಪದ ಸಂಪಾದಕ ಆಗಿದೆ. ಸದ್ಯದ ಅನುಷ್ಠಾನವು ಆನ್‌ಲೈನ್ ಆಗಿದ್ದು, ವೆಬ್ ಬ್ರೌಸರ್ ಮೂಲಕ ಲಭ್ಯವಿದೆ. ಈ ಅನುಷ್ಠಾನದಲ್ಲಿ ಕೆಲವು ಲಕ್ಷಣಗಳಿಗೆ ಕೀ-ಮಣೆ ಅಗತ್ಯವಿದೆ. ಕಂನುಡಿಯ ಊಡುಗೆ ವಿಧಾನವು ಉಲಿಮಿಕ ಕ್ರಮವನ್ನು ಅನುಸರಿಸುತ್ತದೆ, ಅಂದರೆ, ಉಲಿಮೆಗಳನ್ನು ಅವುಗಳ ಉಚ್ಚಾರಣೆಯ ಕ್ರಮದಲ್ಲಿ ನಮೂದಿಸಲಾಗುತ್ತದೆ.

ಇಲ್ಲಿ OPOK!, OHOK!, ಬಳಸುಗ ಮೈತ್ರಿ, ದೋಷ ಮತ್ತು ಅಕ್ರಮ ಸಂಯೋಜನೆ ಮತ್ತು ಅಕ್ಷರ ರಚನೆಗಳನ್ನು ತಡೆಗಟ್ಟುವುದು/ಕಡಿಮೆಗೊಳಿಸುವುದು ಕಂನುಡಿಯ ಪ್ರಮುಖ ನೀತಿಗಳಾಗಿವೆ.

### ೫.೧ OPOK! ನೀತಿ

*ಒಂದು ಉಲಿಮೆ ಒಂದು ಕೀ* (OPOK!) ಕಂನುಡಿಯ ಅನುಷ್ಠಾನದಲ್ಲಿ ಮೊದಲ ಪ್ರಮುಖ ನೀತಿ. ಇಲ್ಲಿ, ಕೀ-ಗಳನ್ನು ಉಲಿಮೆಗಳಿಗೆ ನಿಯೋಜಿಸಲಾಗಿದೆ, ಗೆರೆಮೆಗಳಿಗೆ ಅಲ್ಲ; ಮತ್ತೂ, ಕೀ ಮತ್ತು ಉಲಿಮೆಗಳ ನಡುವೆ ಒಂದು-ಒಂದು ಹೊಂದಾಣಿಕೆ ಇದೆ. ಈ ಹೊಂದಾಣಿಕೆ ಕರ್ನಾಟಕ ಸರ್ಕಾರ ನಿರ್ದಿಷ್ಟಪಡಿಸಿದ ಕನ್ನಡ ಕೀ-ಮಣೆ ಶಿಷ್ಟತೆಗೆ ಅನುಗುಣ ಆಗಿದೆ.




ಚಿತ್ರ ೧. ಕೀ-ಮಣೆ – ಶಿಫ್ಟ್ ಒತ್ತದ




ಚಿತ್ರ ೨. ಕೀ-ಮಣೆ – ಶಿಫ್ಟ್ ಒತ್ತಿದ

### ೫.೨ ಊಹಿತ ಸ್ವರ – ನಿಸ್ವನಿ ್ ಅಥವ ಅ

ಶುದ್ಧ ಉಲಿಮಿಕ ಊಡುಗೆಯ ವಿಧಾನವೆಂದರೆ ಪ್ರತಿ ಸ್ವರ ಮತ್ತು ವ್ಯಂಜನವನ್ನು ಉಚ್ಚರಿಸಲಾದ ಕ್ರಮದಲ್ಲಿ ಟೈಪಿಸುವುದು. ಇದು ವರ್ಣಮಾಲೆಯಲ್ಲಿ ವ್ಯಂಜನಗಳಿಗೆ ಅಂತರ್ಗತವಾಗಿರುವ ಅ ಸ್ವರವನ್ನು ಒಪ್ಪಿಕೊಳ್ಳುವುದಿಲ್ಲ. ಹೀಗಾಗಿ, OPOK! ಚಾಲತಿಯಲ್ಲಿರುವಾಗ, ಕ್ ಗೆ

ಕೇವಲ ಒಂದು ಕೀ–ಒತ್ತು ಅಗತ್ಯವಿದೆ ಆದರೆ ಪ್ರತಿ ಕಾಗುಣಿತ *ಕ, ಕಾ, ಕಿ, …ಕೌ* ಕ್ಕೆ ೨ ಕೀ–ಒತ್ತುಗಳ ಅಗತ್ಯವಿದೆ.

ಕೋಷ್ಟಕ ೧ ರಿಂದ ನೋಡಬಹುದಾದಂತೆ, ಬಹುಪಾಲು ಉಲಿಗಟ್ಟುಗಳು ಮೂಲಾಕ್ಷರಗಳಾಗಿವೆ, ಅಂದರೆ, ಸ್ವತಂತ್ರ ಸ್ವರಗಳು ಮತ್ತು ಸ್ವರ ಅ ಕೂಡಿದ ವ್ಯಂಜನಗಳು. ಆದ್ದರಿಂದ, ವರ್ಣಮಾಲೆಯಲ್ಲಿ ವ್ಯಂಜನಗಳ ಗೆರೆಮೆಗಳನ್ನು ಪೂರ್ವನಿಯೋಜಿತ ಸ್ವರ (ಊಹಿತ ಸ್ವರ) ಅ ದೊಂದಿಗೆ ವಿನ್ಯಾಸಗೊಳಿಸಲಾಗಿದೆ.

ಒತ್ತು ಸಂಯುಕ್ತಾಕ್ಷರದಲ್ಲಿ ಕಂಡುಬರುವ ವ್ಯಂಜನದ ಎರಡನೇ ರೂಪವಾಗಿದೆ. ಎರಡು ವ್ಯಂಜನಗಳ ನಡುವೆ ಯಾವುದೇ ಸ್ವನಿ ಇಲ್ಲದಿದ್ದಾಗ ಒತ್ತು ಎರಡನೇ ವ್ಯಂಜನಕ್ಕೆ ಆದೇಶವಾಗುತ್ತದೆ; ಈ ಸ್ವರ ಅಭಾವವನ್ನು ನಿಸ್ವರ ಅಥವಾ ನಿಸ್ವನಿ ಎನ್ನುತ್ತಾರೆ ಮತ್ತು ವಿರಾಮ ್ ಸಂಕೇತದಿಂದ ಸೂಚಿಸಲಾಗುತ್ತದೆ.

ನಿಸ್ವರ ್ ಊಹಿತ ಸ್ವರವಾಗಿದ್ದರೆ, ಸಂಯುಕ್ತಾಕ್ಷರ ಬರೆಯಲು ವ್ಯಂಜನ ಕೀ–ಗಳನ್ನು ಅನುಕ್ರಮವಾಗಿ ಟೈಪಿಸುಬಹುದು. ಆದರೆ, ಊಹಿತ ಸ್ವರ ಅ ಆಗಿದ್ದರೆ, ಎರಡು ವ್ಯಂಜನಗಳ ನಡುವೆ ನಿಸ್ವರವನ್ನು ಸೂಚಿಸಲು ಇನ್ನೊಂದು ಕೀ ಒತ್ತಬೇಕು. ಉದಾಹರಣೆಗೆ, *ಕ್ತ* ಅನ್ನು ಟೈಪಿಸಲು ಮಾಡಲು ಕೋಷ್ಟಕ ೨ ರಲ್ಲಿ ತೋರಿಸಿರುವಂತೆ ಮೂರು ಕೀ–ಗಳನ್ನು ಒತ್ತಬೇಕಾಗುತ್ತದೆ.

ಈ ಹೆಚ್ಚಿನ ಕೀ–ಒತ್ತಿನ ಅವಶ್ಯಕತೆ, ಊಹಿತ ಸ್ವರದಿಂದ ಆದ ಉಳಿತಾಯವನ್ನು ಗಮನಾರ್ಹವಾಗಿ ಅಲ್ಲಗಳೆಯುತ್ತದೆ. ಆದರೂ, ನಿಸ್ವರ ್ ಕ್ಕೆ ಬದಲಾಗಿ, ಅ ಸ್ವರವನ್ನು ಊಹಿತ ಸ್ವರವಾಗಿ ಇಟ್ಟುಕೊಂಡರೆ ೨೪% (೪೨%–೧೮%) ಕೀ–ಒತ್ತುಗಳನ್ನು ಉಳಿಸಬಹುದು

ಕೆಲವರಿಗೆ, ಇದು ಸ್ವಲ್ಪ ಅಸ್ವಾಭಾವಿಕ ಮತ್ತು ಅಪ್ಪಟ ಉಲಿಮಿಕ ವಿಧಾನ ಅಲ್ಲ ಎನಿಸಬಹುದು; ಮತ್ತು ಟೈಪಿಸುವ ವೇಗದಲ್ಲಿ ಇಳಿತವನ್ನು ಕಾಣಬಹುದು.

| ಊಹಿತ ಸ್ವರ | ಅ | | | ನಿಸ್ವರ ್ | | |
|---|---|---|---|---|---|---|
| ಒತ್ತಿದ ಕೀ–ಗಳು | k | f | t | k | t | a |
| ಫಲಿತಾಂಶ | ಕ | ಕ್ | ಕ್ತ | ಕ್ | ಕ್ತ್ | ಕ್ತ |

ಕೋಷ್ಟಕ ೨: ಸಂಯುಕ್ತಾಕ್ಷರವನ್ನು ಟೈಪಿಸುವುದು

ಅಂತೆ, ಕಂನುಡಿಯಲ್ಲಿ ಸ್ವರ ಅ ಮತ್ತು ನಿಸ್ವರ ್ ಎರಡರಲ್ಲಿ ಒಂದನ್ನು ಸೂಕ್ತವೆನಿಸಿದಂತೆ ಊಹಿತ ಸ್ವರ ಎಂದು ಆಯ್ದುಕೊಳ್ಳಬಹುದು.

## 5.3 OHOK! ನಿಯಮ

OHOK! ಒತ್ತಡವನ್ನು ಊಡುಗೆಯಾಗಿ ತೆಗೆದುಕೊಂಡು ವ್ಯಂಜನಗಳ ದ್ವಿತೀಯ ರೂಪ(ಒತ್ತು)ಗಳನ್ನು ಒದಗಿಸುತ್ತದೆ. ಅಂದರೆ, ಒತ್ತು ಕೊಡಲು ಕೀ ಮೇಲೆ ಒತ್ತಡ ಹಾಕುವುದು ಅಥವಾ ಕೀ–ಅನ್ನು ಒತ್ತಿ ಹಿಡಿಯುವುದು. ಇದೆ *OHOK! ಒತ್ತಿ ಹಿಡಿ ಒತ್ತು ಕೊಡು!* ನಿಯಮ.

ಒತ್ತಡ ಗ್ರಹಿಸಲಾಗದ ಯಾಂತ್ರಿಕ ಕೀ–ಮಣೆ ಉಪಯೋಗಿಸುವಾಗ OHOK! ಸಮಯ ಆಧಾರಿತವಾಗಿದೆ, ಅಂದರೆ, ಕೀ–ಅನ್ನು ಎಷ್ಟು ಸಮಯ ಒತ್ತಿ ಹಿಡಿದಿದೆ ಎನ್ನುವುದರ ಮೇಲೆ ಅವಲಂಬಿತವಾಗಿದೆ. ಕೀ–ಮಣೆಯ ಘಟನಾ ಸಮಯ, ಸ್ಪರ್ಶ ಮತ್ತು ಒತ್ತಡದ ಸೂಕ್ಷ್ಮತೆಗಳನ್ನು OHOK! ವೇಗಕ್ಕೆ ಉತ್ತಮಿಸಬಹುದಾದರೂ, ಇದು ಬಳಸುಗರ ಸಾಮಾನ್ಯ ಸಾಮರ್ಥ್ಯವನ್ನು ಮೀರಿರಬಹುದು ಎಂದು ಅರಿತಿದ್ದೇವೆ.

ಒತ್ತಡ ಗ್ರಹಿಸಬಲ್ಲ (ಮೊಬೈಲ್) ಸಾಧನಗಳನ್ನು ಉಪಯೋಗಿಸಿದಲ್ಲಿ, ಇದನ್ನು ಒತ್ತು ***ಹಾಕು*** *ಒತ್ತು ಕೊಡು!* ಎಂದು ಕರೆಯಬಹುದು. ಇಲ್ಲಿ ಕೀ–ಒತ್ತುಗಳನ್ನು ಉಳಿಸುವದಲ್ಲದೆ ಗಮನೀಯ ಸಮಯವನ್ನೂ ಉಳಿಸುವ ಹೆಚ್ಚಿನ ಸಾಧ್ಯತೆ ಇದೆ.

OHOK! ಅನ್ನು ಮೂರು ಬಗೆಗಳಲ್ಲಿ ನಡೆಸಬಹುದು. ಇಲ್ಲಿ ಒತ್ತಡ ಹಾಕುವುದು (ಅಥವಾ ಒತ್ತಿ ಹಿಡಿಯುವುದು) ಅನ್ನು ಮೇಲ್ಬರಹ $^{+}$ ಚಿಹ್ನೆಯಿಂದ ಸೂಚಿಸಿದೆ.

೧. **ಸ್ವ–ಒತ್ತು ಬಗೆ** (SO): ಇಲ್ಲಿ ವ್ಯಂಜನಕ್ಕೆ ತನ್ನದೇ ಆದ ಎರಡನೆಯ ರೂಪ (ಒತ್ತು) ಅಂಟಿದೆ. ಇದಕ್ಕೆ ದ್ವಿತ್ವ ಎಂದೂ ಹೆಸರು. ಈ ಬಗೆಯಲ್ಲಿ, ಉದಾಹರಣೆಗೆ, $k^{+}$ ಕ್ಕ ಎಂದಾಗುತ್ತದೆ. ಮತ್ತು $kn^{+}w$, *knfnw* ಗೆ ಸರಿಸಮವಾಗಿದ್ದು, ಕನ್ನಡ ಎಂದು ತೋರಿಕೊಳ್ಳುತ್ತದೆ.

೨. **ಕಂಡಂತೆ ಒತ್ತು ಬಗೆ** (KO): ಇದು ದೃಶ್ಯ ವಿಧಾನವಾಗಿದ್ದು, ಊಡುಗೆಯು ಬರೆಯುವ ಕ್ರಮವನ್ನು ಅನುಸರಿಸುತ್ತದೆ. ಕಣ್ಣಿಗೆ ಕಾಣುವುದು ಮೊದಲು ಸ್ವರಯುಕ್ತ ವ್ಯಂಜನ ನಂತರ ಒತ್ತು. ಇಲ್ಲಿ, ವ್ಯಂಜನ ಕೀ–ಅನ್ನು ಒತ್ತಿ ಹಿಡಿದಾಗ ಅದರ ಒತ್ತು ಹಿಂದಿನ ವ್ಯಂಜನಕ್ಕೆ ಅಂಟಿಕೊಳ್ಳುತ್ತದೆ. ಉದಾಹರಣೆಗೆ, $st^{+}r^{+}I$ (= *sftfrI*) ಕೀ–ಗಳು ಸ್ತ್ರೀ ಎಂದಾಗುತ್ತವೆ.

೩. **ಅಂದಂತೆ ಒತ್ತು** (AO): ಇದು “ನೀವು ಹೇಳಿದಂತೆ” ಅಥವಾ ಉಲಿದಂತೆ ಆಗಿದ್ದು, ಊಡುಗೆ ಉಚ್ಚಾರಣೆಯ ಕ್ರಮವನ್ನು ಅನುಸರಿಸುತ್ತದೆ. ವ್ಯಂಜನ ಕೀ–ಅನ್ನು ಒತ್ತಿ ಹಿಡಿದಾಗ ನಿಸ್ವರವನ್ನು (ವಿರಾಮ) ಸೇರಿಸುವ ಮೂಲಕ ಒತ್ತು ಅಂಟಿಸಿಕೊಳ್ಳಲು ಸಿದ್ಧವಾಗುತ್ತದೆ. ಒತ್ತು (ಉಚ್ಚಾರಣೆಯಂತೆ) ಈ ವ್ಯಂಜನದ ಮೇಲೆ ಇರುವುದರಿಂದ ಇದು ಉಲಿಮಿಕ ಕ್ರಮ ಮತ್ತು ಮುಂದಿನ ವ್ಯಂಜನವು ಒತ್ತು ಆಗಿ ಬದಲಾಗುತ್ತದೆ. ಇಲ್ಲಿ $k^+$ (*kf* ಗೆ ಸಮ) ಕ್ ಆಗುತ್ತದೆ. $s^+t^+rI$ ಸ್ತ್ರೀ ಎಂದು ತೋರುವುದು. ಅಂದರೆ, ಈ ಬಗೆಯ “ಒತ್ತಿ ಹಿಡಿ” ಸಾಮಾನ್ಯ ಬಗೆಯ *f* ಕೀ–ಗೆ ಪರ್ಯಾಯವಾಗಿದೆ

| **ಊಹಿತ ಸ್ವರ = ಅ** | | | | | | | | | | | |
|---|---|---|---|---|---|---|---|---|---|---|---|
| **ಉಲಿಗಟ್ಟು ತೆರ** | | **OHOK! ಬಗೆ** | | | | | | | | | |
| | | ಸಾಮಾನ್ಯ | | | OHOK! SO ದ್ವಿತ್ವ | | | OHOK! KO ಕಂಡಂತೆ | | OHOK! AO ಅಂದಂತೆ | |
| **ಸ್ವ–ಒತ್ತು (ದ್ವಿತ್ವ)** | ಕೀ–ಗಳು | k | f | k | $k^+$ | | | k | $k^+$ | $k^+$ | k |
| | ತೋರಿಕೆ | ಕ | ಕ್ | ಕ್ಕ | ಕ್ಕ | | | ಕ | ಕ್ಕ | ಕ್ | ಕ್ಕ |
| **ವಿಜಾತಿ ಒತ್ತು** | ಕೀ–ಗಳು | g | f | r | g | f | r | g | $r^+$ | $g^+$ | r |
| | ತೋರಿಕೆ | ಗ | ಗ್ | ಗ್ರ | ಗ | ಗ್ | ಗ್ರ | ಗ | ಗ್ರ | ಗ್ | ಗ್ರ |
| **ಕೊನೆಯಲ್ಲಿ ವಿರಾಮ** | ಕೀ–ಗಳು | n | f | | n | f | | n | f | $n^+$ | |
| | ತೋರಿಕೆ | ನ | ನ್ | | ನ | ನ್ | | ನ | ನ್ | ನ್ | |
| **V[MH]? + ಸ್ವ–ಒತ್ತು** | ಕೀ–ಗಳು | ak | f | k | $ak^+$ | | | $ak^+$ | | $ak^+$ | k |
| | ತೋರಿಕೆ | ಅಕ | ಅಕ್ | ಅಕ್ಕ | ಅಕ್ಕ | | | ಅಕ್ಕ | | ಅಕ್ | ಅಕ್ಕ |
| ೧೦೦೦ ಉಲಿಗಟ್ಟುಗಳಿಗೆ ಉಳಿಸಿದ ಕೀ–ಗಳು | | **0** | | | **174** | | | **196** | | **193** | |

ಕೋಷ್ಟಕ ೩: ಕೀ ಉಳಿತಾಯಗಳು, ಸ್ವರ ಅ ಊಹಿತವಾದಾಗ

| **ಉಲಿಗಟ್ಟು ತೆರ** | | **ಊಹಿತ ಸ್ವರ = ನಿಸ್ವರ ್** | | | | | | | |
|---|---|---|---|---|---|---|---|---|---|
| | | **OHOK! ಬಗೆ** | | | | | | | |
| | | ಸಾಮಾನ್ಯ | | OHOK! SO ದ್ವಿತ್ವ | | OHOK! KO ಕಂಡಂತೆ | | OHOK! AO ಅಂದಂತೆ | |
| **ಸ್ವ–ಒತ್ತು (ದ್ವಿತ್ವ)** | ಕೀ–ಗಳು | k | k | $k^+$ | | k | $k^+$ | $k^+$ | k |
| | ತೋರಿಕೆ | ಕ್ | ಕ್ಕ್ | ಕ್ಕ್ | | ಕ್ | ಕ್ಕ್ | ಕ್ | ಕ್ಕ್ |
| **ವಿಜಾತಿ ಒತ್ತು** | ಕೀ–ಗಳು | g | r | g | r | g | $r^+$ | $g^+$ | r |
| | ತೋರಿಕೆ | ಗ್ | ಗ್ರ್ | ಗ್ | ಗ್ರ್ | ಗ್ | ಗ್ರ್ | ಗ್ | ಗ್ರ್ |
| **ಕೊನೆಯಲ್ಲಿ ವಿರಾಮ** | ಕೀ–ಗಳು | n | | n | | | | $n^+$ | |
| | ತೋರಿಕೆ | ನ್ | | ನ್ | | | | ನ್ | |
| **V[MH]? + ಸ್ವ–ಒತ್ತು** | ಕೀ–ಗಳು | ak | k | $ak^+$ | | $ak^+$ | | $ak^+$ | k |
| | ತೋರಿಕೆ | ಅಕ್ | ಅಕ್ಕ್ | ಅಕ್ಕ್ | | ಅಕ್ಕ್ | | ಅಕ್ | ಅಕ್ಕ್ |
| ೧೦೦೦ ಉಲಿಗಟ್ಟುಗಳಿಗೆ ಉಳಿಸಿದ ಕೀ–ಗಳು | | **0** | | **87** | | **11** | | **0** | |

ಕೋಷ್ಟಕ ೪: ಕೀ ಉಳಿತಾಯಗಳು, ನಿಸ್ವರ ್ ಊಹಿತವಾದಾಗ

### ೫.೪ ಕೀ ಉಳಿತಾಯಗಳು

ಊಹಿತ ಸ್ವರ ಅ ಇದ್ದಾಗ, OHOK ದ ಮೂರು ಬಗೆಗಳಲ್ಲಿ ವಿವಿಧ ತೆರದ ಉಲಿಗಟ್ಟುಳಿಗೆ ಎಷ್ಟು ಕೀ ಉಳಿತಾಯ ಆಗಬಹುದೆಂದು ಕೋಷ್ಟಕ ೩ ತೋರಿಸಿದೆ. ಉದಾಹರಣೆಗೆ, ಸಾಮಾನ್ಯವಾಗಿ ೩ ಕೀ–ಗಳ ಅಗತ್ಯವಿರುವ ಒಂದು ದ್ವಿತ್ವವನ್ನು ಸ್ವ –ಒತ್ತು SO ಬಗೆಯಲ್ಲಿ ಕೇವಲ ೧ ಕೀ ಸಾಕು.

ಹಾಗೆಯೆ., ಕೀ ಊಹಿತ ಸ್ವರ ನಿಸ್ವನಿ ಇದ್ದಾಗ ಕೀ ಉಳಿತಾಯವಗಳನ್ನು ಕೋಷ್ಟಕ ೪ರಲ್ಲಿ ಪಟ್ಟಿ ಮಾಡಿದೆ.

ಈ ಕೋಷ್ಟಕಗಳು, ಕೋಷ್ಟಕ ೧ ರಲ್ಲಿನ ಆವರ್ತನ ದತ್ತಾಂಶಗಳನ್ನು ಆಧರಿಸಿ ಸಾಮಾನ್ಯ ಕಡತ ಒಂದರಲ್ಲಿ ಪ್ರತಿ ೧೦೦೦ ಉಲಿಗಟ್ಟುಗಳಿಗೆ ಉಳಿಸಲಾದ ಕೀ ಸಂಖ್ಯೆಗಳನ್ನು ತೋರಿಸುತ್ತವೆ. ಅಂದರೆ, ಊಹಿತ ಸ್ವರ ಅ ಇದ್ದಾಗ,OHOK! SO ಬಗೆಯಲ್ಲಿ ೧೭೪ ಕೀ ಉಳಿತಾಯವನ್ನು ಸಾಧಿಸಬಹುದು.

ಊಹಿತ ಸ್ವರ ಅ ಇದ್ದಾಗ, ಮೂರು ಬಗೆಗಳಲ್ಲಿ ಅಷ್ಟು ವ್ಯತ್ಯಾಸ ಕಾಣದಿದ್ದರೂ, ಅತಿ ಹೆಚ್ಚು ಕೀ ಉಳಿತಾಯ OHOK! SO ಬಗೆಯಲ್ಲಿ ಆಗುತ್ತದೆ ಎಂಬುದನ್ನು ಗಮನಿಸಬಹುದು.

**ಇನ್ನೊಂದು ಯೋಜನೆ**: ಒಂದು ಕೀಲಿಯನ್ನು ಒತ್ತಿ ಹಿಡಿದಾಗ ಮುಂದಿನ ಕೀ ಒತ್ತು ಆಗುತ್ತದೆ. ಉದಾ. *k* ಒತ್ತಿ ಹಿಡಿದುಕೊಳ್ಳಿ, ನಂತರ *r* ಟೈಪಿಸುವುದರಿಂದ *ಕ್ರ* ಎಂದು ಪರಿವರ್ತಿಸುವುದು. ಕೀ–ಮಣೆಯಲ್ಲಿ ಕೀ ಸ್ಥಾನಗಳು ಸ್ಥಿರ ಆಗಿರುವುದರಿಂದ ಈ ಯೋಜನೆಯು ಭೌತಿಕ ಮಿತಿಗಳನ್ನು ಹೊಂದಿದೆ. ಕೈಗಳನ್ನು ಅಥವಾ ಬೆರಳುಗಳನ್ನು ದಾಟಲು ಅಥವಾ ಕೀಗಾಗಿ ಯಾವ ಕೈಯನ್ನು ಬಳಸಬೇಕೆಂದು ತ್ವರಿತವಾಗಿ ನಿರ್ಧರಿಸುವುದು ಅವಶ್ಯವಾಗುತ್ತದೆ. ಪ್ರತಿ ಒಂದು ಕೀ–ಗೂ ಅದೇ ಸ್ಥಳದಲ್ಲಿ ಅದೇ ಬೆರಳನ್ನು ಕಣ್ಣಾಡಿಸದೆ ಬಳಸಲು ತರಬೇತಿ ಪಡೆದ ಟೈಪಿಗರ ನಿರೀಕ್ಷೆಗೆ ಇದು ವಿರುದ್ಧವಾಗಿದೆ. ಇದು ದೈಹಿಕವಾಗಿ ಅಸಾಧ್ಯ ಅಥವಾ ಸಂಪೂರ್ಣವಾಗಿ ಗೊಂದಲಮಯ ಆಗಬಹುದು. ಹಾಗಾಗಿ ಈ ಯೋಜನೆಯ ಕೈ ಬಿಡಲಾಗಿದೆ.

## ೬ ಅನುಕೂಲ ನಿಯಮಗಳು

ನವೀನ ವಿಧಾನವನ್ನು ಪರಿಚಯಿಸುವುದು ಅಲ್ಲದೆ, ಅನುಕೂಲಕ್ಕಾಗಿ ಅಥವಾ ದೋಷಗಳನ್ನು ನಿವಾರಿಸುವ ಅಥವಾ ಕಡಿಮೆ ಮಾಡುವ ಹಲವಾರು ಬಳಸುಗ ಸ್ನೇಹಿ ಲಕ್ಷಣಗಳನ್ನು ಕೂಡ ಕಂನುಡಿ ಅಳವಡಿಕೊಂಡಿದೆ. ಅಂತಹ ಕೆಲವು ಲಕ್ಷಣಗಳನ್ನು ಇಲ್ಲಿ ವಿವರಿಸಲಾಗಿದೆ.

### ೬.೧ ಹಿಂದಳಿಸು ←*BS*

ಟೈಪಿಸುವಾಗ, ಬಳಸುಗನು ತಪ್ಪು (ಪಕ್ಕದ) ಕೀ–ಅನ್ನು ಒತ್ತಬಹುದು. ತಪ್ಪನ್ನು ಅರಿತುಕೊಂಡಾಗ, ಹಿಂದಳಿಸು ಕೀ–ಅನ್ನು ಬಳಸುವುದು ಸಾಮಾನ್ಯ. ಆಗ ಬಳಸುಗನು ಉಲಿಗಟ್ಟಿನ ಕೊನೆಯ ಉಲಿಯನ್ನು ಅಥವಾ ಸದ್ಯ ಮಾಡಿದ ತಪ್ಪನ್ನು ತಿದ್ದಲು ಬಯಸುತ್ತಾನೆ.

ಆದರೆ, ಹಿಂದಳಿಸು ಕೀ ←*BS* ಕರ್ಸರ್ ಹಿಂದಿನ ಉಲಿಗಟ್ಟನ್ನು ಸಂಪೂರ್ಣವಾಗಿ ಅಳಿಸಿ ಬಿಡುತ್ತದೆ. ಉಲಿಗಟ್ಟನ್ನು ಕಟ್ಟಲು ಈ ವರೆಗೆ ಮಾಡಿದ ಎಲ್ಲಾ ಪ್ರಯತ್ನಗಳು ವ್ಯರ್ಥವಾಗಿ ಹೋಗುತ್ತವೆ. ಆದ್ದರಿಂದ, ಕಂನುಡಿ ನಾಲ್ಕು ರೀತಿಯ ಅಳಿಸುಗಳನ್ನು ಗುರುತಿಸುತ್ತದೆ:

೧. **ಉಲಿಮೆ ಅಳಿಸು**: ←*BS* ಕೀಗೆ ನೇಮಿಸಿದೆ – ಕರ್ಸರ್‌ನ ಎಡಕ್ಕೆ ಇರುವ ಉಲಿಮೆಯನ್ನು ಅಳಿಸು.
೨. **ಅಕ್ಷರ ಅಳಿಸು**: *alt*←*BS* ಕೀಗೆ ನೇಮಿಸಿದೆ. ಕರ್ಸರ್‌ನ ಎಡಕ್ಕೆ ಇರುವ (ಯೂನಿಕೋಡ್) ಅಕ್ಷರವನ್ನು ಅಳಿಸು.
೩. **ಉಲಿಗಟ್ಟು ಅಳಿಸು**: *shift*←*BS* ಕೀಗೆ ನೇಮಿಸಿದೆ. ಕರ್ಸರ್‌ನ ಎಡಕ್ಕೆ ಇರುವ ಉಲಿಗಟ್ಟನ್ನು ಅಳಿಸು.
೪. **ಪದ ಅಳಿಸು**: *ctrl*←*BS* ಕೀಗೆ ನೇಮಿಸಿದೆ. ಕರ್ಸರ್‌ನ ಎಡಕ್ಕೆ ಇರುವ ಪದವನ್ನು ಅಳಿಸು.

### ೬.೨ ಶೂನ್ಯೀಕರಣ

ಬರವಣಿಗೆಯಲ್ಲಿ, ವ್ಯಂಜನದ ಹಿಂದಿನ ಅನುನಾಸಿಕವನ್ನು ಪ್ರತಿನಿಧಿಸಲು ಅನುಸ್ವಾರ, ಸೊನ್ನೆ ಅಥವ ಶೂನ್ಯವನ್ನುಬಳಸಲಾಗುತ್ತದೆ. ಆದರೂ ಅನುನಾಸಿಕವನ್ನು ಬರೆಯುವುದು ತಪ್ಪಲ್ಲ. ಹೀಗಾಗಿ, ವರ್ಗೀಯ ವ್ಯಂಜನದ ಮೊದಲು ಸೊನ್ನೆಯನ್ನು ಅದೇ ವರ್ಗದ ಅನುನಾಸಿಕದಂತೆ ಉಚ್ಚರಿಸಲಾಗುತ್ತದೆ. ವರ್ಗೀಯ ಅಥವ ಅವರ್ಗೀಯ, ವ್ಯಂಜನದ ಹಿಂದಿನ ಅನುನಾಸಿಕವನ್ನು ಸೊನ್ನೆಗೆ ಸ್ವಯಂಚಾಲಿತವಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಶೂನ್ಯೀಕರಣ ಎಂದು ಕರೆಯಲಾಗುತ್ತದೆ.

ಅನುಕೂಲಕ್ಕಾಗಿ, ಈ ಅನುಷ್ಠಾನದಲ್ಲಿ ಕೇವಲ *n*/*m* ಕೀ–ಗಳನ್ನು ಮಾತ್ರ ಶೂನ್ಯೀಕರಣಕ್ಕಾಗಿ ಪರಿಗಣಿಸಲಾಗಿದೆ. *n* ಮತ್ತು *m* ಎರಡನ್ನೂ

ಸ್ವಯಂಚಾಲಿತವಾಗಿ ಶೂನ್ಯೀಕರಿಸವ ಮೂಲಕ ಊಡುಬಳಿಯನ್ನು ಸುಲಭಗೊಳಿಸುತ್ತದೆ.

ಮುಂದೆ ವರ್ಗೀಯ ವ್ಯಂಜನ ಬಂದಾಗ ಶೂನ್ಯೀಕರಿಸುವುದು ಸರಳ ಮತ್ತು ಸ್ಪಷ್ಟ. ಆದರೆ ಅವರ್ಗೀಯ ವ್ಯಂಜನ ಬಂದಾಗ ಸಂದಿಗ್ಧ ಮತ್ತು ಅಸ್ಪಷ್ಟ; ಅಲ್ಲದೆ, ಅಪವಾದಗಳು ಉಂಟು.

ಅವರ್ಗೀಯ ವ್ಯಂಜನದ ಹಿಂದಿನ ಸೊನ್ನೆಯನ್ನು ಹೆಚ್ಚಿನ ಜನರು ತಪ್ಪಾಗಿಯೆ ಉಚ್ಚರಿಸುತ್ತಾರೆ. ಉದಾಹರಣೆಗೆ, ಸಂಶಯವನ್ನು ಸಮ್ಶಯ samśaya ಎಂದೂ, ಸಂಸ್ಕೃತ ಅನ್ನು sanskr̥ta ಅಥವ samskr̥ta ಎಂದೂ ಉಚ್ಚರಿಸುತ್ತಾರೆ. ಶೂನ್ಯೀಕರಣದಲ್ಲಿ ತಪ್ಪು ಉಚ್ಚಾರಕ್ಕೆ ಅನುಗುಣವಾಗಿಯೆ ಟೈಪಿಸಲು ಅನುವು ಇರುವುದರಿಂದ ಊಡುಬಳಿ ಉಲಿಮಿಕ ಆಗಿ ಉಳಿಯುತ್ತದೆ.

ಶೂನ್ಯೀಕರಣ ಕೀ-ಗಳನ್ನು ಉಳಿಸುವುದಿಲ್ಲ; ಆದರೆ ಅಂದಂತೆ (ಉಚ್ಚಾರಣೆಯಂತೆ) ಮತ್ತು ಕಂಡಂತೆ (ನೋಡಿದಂತೆ) ನಡುವಿನ ಹರಿವನ್ನು ಬದಲಾಯಿಸುವ ಅಗತ್ಯವಿಲ್ಲ. ಅವರು ಟೈಪಿಸುವಾಗ ಕನ್ನಡ ಪದಗಳನ್ನು ಮಾನಸಿಕವಾಗಿ ರೋಮನ್ ಲಿಪಿಯಲ್ಲಿ ಕಾಗುಣಿತ (spell) ಮಾಡುವವರಿಗೆ ಇದು ವಿಶೇಷವಾಗಿ ಅನುಕೂಲಕರವಾಗಿದೆ. ಮತ್ತು ಅಂತಹ ಪ್ರಾಸಂಗಿಕ ಬಳಸುಗರು ಅನೇಕರಿದ್ದಾರೆ.

### ೬.೩ ಅರ್ಕೀಕರಣ

ಅರ್ಕಾವೊತ್ತು ೯ ಅನ್ನು ಹೆಚ್ಚಾಗಿ *ರ್* ಬದಲಿಗೆ ಬಳಸಲಾಗಿದ್ದರೂ, *ರ್‍ಯಾಂಕ* ಮತ್ತು *ಸರ್‍ರನೆ* ಗಳಲ್ಲಿಯಂತೆ, ಇದು ಅಪೇಕ್ಷಣೀಯವಲ್ಲದ ಕೆಲವು ಸಂದರ್ಭಗಳಿವೆ. ಅಂತಹ ಸಂದರ್ಭಗಳಲ್ಲಿ ಕಂನುಡಿ ತಂತಾನೆ ಸರಿಯಾದ ರೂಪವನ್ನು ತೋರಿಸುತ್ತದೆ (ಅರ್ಕೀಕರಿಸುತ್ತದೆ.) ಮತ್ತು ಬಳಸುಗರಿಗೆ ಅಡೆತಡೆ ಇಲ್ಲದೆ ಟೈಪಿಸಲು ಅನುವಾಗುತ್ತದೆ.

## ೭ ದೋಷ ನಿರೋಧಕ ನಿಯಮಗಳು

ಟೈಪಿಸುವಾಗ ಆಗುವ ದೋಷ-ಪ್ರಮಾದಗಳನ್ನು ತಡೆಗಟ್ಟಲು ಮತ್ತು ಬಳಸುಗನನ್ನು ಎಚ್ಚರಿಸಲು ಭಾಷೆಯ ನೆಲೆ-ತಿಳಿವನ್ನು ಬಳಸಬಹುದು. ಕೆಲವು ಉದಾಹರಣೆಗಳನ್ನು ಕೆಳಗೆ ವಿವರಿಸಲಾಗಿದೆ.

### ೭.೧ ಅನಾರಂಭಿಕ ಸ್ವರ

ಕನ್ನಡದಲ್ಲಿ, ಪದದ ಆರಂಭದಲ್ಲಿ ಮಾತ್ರ ಸ್ವತಂತ್ರ ಸ್ವರ ಬರಬಹುದು. ಅನಾರಂಭಿಕವಾಗಿ ಸ್ವತಂತ್ರ ಸ್ವರ ಬರೆಯುವುದನ್ನು ಕಂನುಡಿ ತಡೆಯುತ್ತದೆ.

### ೭.೨ ಮಹಾಪ್ರಾಣದ ಒತ್ತು

ಒಂದರ ನಂತರ ಒಂದು ಮಹಾಪ್ರಾಣ ವ್ಯಂಜನಗಳನ್ನು ಉಚ್ಚರಿಸಲು ಸಾಧ್ಯವಿಲ್ಲ. ಅಂತೆ, ಉಲಿಮಿಕ ಆಗಿರುವ ಕನ್ನಡ ಬರಹದಲ್ಲಿ ಒಂದು ಮಹಾಪ್ರಾಣಕ್ಕೆ ಇನ್ನೊಂದು ಮಹಾಪ್ರಾಣದ ಒತ್ತು ಕೊಡಲಾಗುವುದಿಲ್ಲ. ಇಂಥ ಅಕ್ರಮ ಬರವಣಿಗೆಯನ್ನು ಕಂನುಡಿ ತಡೆಯುತ್ತದೆ. ಆದರೂ, ಕೆಲವು ಅಪವಾದಗಳು ರೂಢಿಗತವಾಗಿ ಬಿಟ್ಟಿವೆ, ಉದಾ., ವಿಠ್ಠಲ.

## ೮ ಅಪವಾದ ನಿರ್ವಹಣೆ

ಅನುಕೂಲ ಮತ್ತು ದೋಷ ತಡೆಗಟ್ಟುವ ನಿಯಮಗಳು ನಿಖರ(ನಿರ್ದುಷ್ಟ)ವಾಗಿ ಇರದಿರಬಹುದು, ಮತ್ತು ಮೊದಲೇ ಹೇಳಿದಂತೆ ಅಪವಾದಗಳನ್ನು ಕಾಣಬಹುದು. ಆದ್ದರಿಂದ ಇಂಥ ನಿಯಮಗಳನ್ನು ಮೀರಿ ಬಯಸಿದಂತೆ ಟೈಪಿಸಲು ಸಾಧ್ಯ ಎಂದು ಖಚಿತಪಡಿಸಿಕೊಳ್ಳುವುದು ಅವಶ್ಯ. ಇದಕ್ಕೆ ಎರಡು ಉಪಾಯಗಳಿವೆ: ಅ) ZWJ / ZWNJ ಅಕ್ಷರಗಳನ್ನು ಬಳಸುವುದು ಮತ್ತು ಆ) ಉಲಿಮೆಗಳ ನಡುವೆ "ಖಾಲಿ" ಸ್ಪೇಸ್ ಅಕ್ಷರವನ್ನು ಟೈಪಿಸಿ ನಂತರ ಅದನ್ನು ತೆಗೆದುಹಾಕುವುದು.

## ೯ ಕೊನೆಯ ಮಾತುಗಳು

ಕಂನುಡಿ ಹಲವಾರು ನವೀನ ಮತ್ತು ಪ್ರಾಯೋಗಿಕ ವೈಶಿಷ್ಟ್ಯಗಳ ಒಂದು ನಿದರ್ಶಕ ಪದ ಸಂಪಾದಕ. ಇಲ್ಲಿ OHOK! ಎನ್ನುವ ನವೀನ ಊಡುಬಳೆಯನ್ನು ಪರಿಚಯಿಸಿದ್ದೇವೆ. ಈ ಊಡುಬಳೆಯ ಸ್ವ-ಒತ್ತು(SO), ಕಂಡಂತೆ (ನೀವು ನೋಡುವಂತೆ, KO), ಮತ್ತು ಅಂದಂತೆ (ನೀವು ಹೇಳುವಂತೆ AO) ಎನ್ನುವ ಮೂರು ಬಗೆಗಳನ್ನು ವಿವರಿಸಿದ್ದೇವೆ. ಕಂಡಂತೆ (KO) ಬಗೆ ಉಲಿಮಿಕ ಊಡುಗೆ ಕ್ರಮವನ್ನು ಅನುಸರಿಸುವುದಿಲ್ಲ ಎಂದು ಗಮನಿಸಬಹುದು. ಆದರೂ, ಉಲಿಮೆಗಳನ್ನು, ಬರೆಯುವಂತೆ ಕಾಣದೆ, ಮನಸ್ಸಿನಲ್ಲೆ ಧ್ವನಿಸಿಕೊಳ್ಳುವ ಒಲವು ಉಳ್ಳವರಿಗೆ ಈ ಬಗೆ ಸಹಜ ಮತ್ತು ಉತ್ತಮ ಎನಿಸಬಹುದು.

OHOK! ಮೊಬೈಲ್ ಅಥವಾ ಕೀ–ಗಳ ಒತ್ತಡವನ್ನು ಗ್ರಹಿಸಬಹುದಾದ ಸಾಧನಕ್ಕೆ ಅತ್ಯಂತ ತಕ್ಕುದಾದ ವಿಧಾನ. ಹಾಗೆ ಅಳವಡಿಸಿದಾಗ ಇದನ್ನು ಒತ್ತು ***ಹಾಕು*** *ಒತ್ತು ಕೊಡು* ಎಂದು ಕರೆಯಬಹುದು. ಇಲ್ಲಿ ಕೀ–ಒತ್ತುಗಳ ಜೊತೆ ಗಮನೀಯ ಸಮಯದ ಉಳಿತಾಯ ಸಾಧ್ಯ. ಯಾಂತ್ರಿಕ ಕೀ–ಮಣೆಯಲ್ಲೂ ಇದು ಅಷ್ಟೇ ಕೀ–ಒತ್ತುಗಳನ್ನು ಉಳಿಸುತ್ತದೆ. ಆದರೆ ಸಮಯದ ಉಳಿತಾಯ ಕೀ–ಮಣೆ ಸಜ್ಜಿಕೆಯ ಮೇಲೆ ಅವಲಂಬಿತವಾಗಿದೆ.

ಬಳಸುಗ ಸ್ನೇಹಪರತೆಯನ್ನು ಸುಧಾರಿಸಲು ನೆಲೆ–ತಿಳಿವನ್ನು ಬಳಸಬಹುದು ಎಂದು ತೋರಿಸಿದ್ದೇವೆ. ಉಲಿಮೆ ಅಳಿಸು, ಅಕ್ಷರ ಅಳಿಸು, ಉಲಿಗಟ್ಟು ಅಳಿಸು, ಮತ್ತು ಪದ ಅಳಿಸು ಎನ್ನುವ ನಾಲ್ಕು ವಿಧದ ಅಳಿಸುಗಳನ್ನು ಗುರುತಿಸಿದ್ದೇವೆ. ಕಂನುಡಿಯಲ್ಲಿ ಅವುಗಳನ್ನು ಹಿಂದಳಿಸು ಕೀ–ಗೆ ಅಳವಡಿಸಿದ್ದೇವೆ. ಹೀಗೆ ಬಳಸುಗ ಸ್ನೇಹಪರತೆಗೆ, ಊಡುಗೆಯ ಹರಿವು ಮತ್ತು ವೇಗಗಳನ್ನೂ ಉಳಿಸಿಕೊಳ್ಳಲು, ಮತ್ತೆಲ್ಲಕ್ಕೂ ನೆಲೆ–ತಿಳಿವು ಸಹಾಯಕಾರಿ ಮತ್ತು ಅಗತ್ಯ ಎಂದು ತೋರಿಸಿದ್ದೇವೆ.

ಇದಲ್ಲದೆ, ಈ ನಿಯಮಗಳನ್ನು ಮುಕ್ತಾಕ್ಷರಶೈಲಿ (open type font) ಕೋಷ್ಟಕಗಳಲ್ಲಿ ಭಾಷಾ ವಿಶೇಷ ಸಂಪನ್ಮೂಲಗಳಾಗಿ ಸೇರಿಸಿದರೆ ಪ್ರತ್ಯೇಕ ತಂತ್ರಾಂಶದ ಅಗತ್ಯವನ್ನು ತೆಗೆದುಹಾಕಬಹುದು.

## ೧೦ ಉಲ್ಲೇಖಗಳು


[೧] V. Dixit, “An Intelligent Screen Editor for Kannada and Other Indian Languages,” *SAIL: A Journal of Society for the Advancement of Indian Languages*, pp. 12-14, January 1986.

[೨] ವಿ. ದೀಕ್ಷಿತ, “ಚಿತ್ರಗುಪ್ತ: ಭಾರತೀಯ ಭಾಷೆಗಳಿಗೆ ಕಂಪ್ಯೂಟರ್ ಮೇಲೆ ಅಚ್ಚುಕಟ್ಟುವ ಒಂದು ಪದ್ಧತಿ,” *ಸುಧಾ*, ಪು. ೫೧, ೨೮ ಏಪ್ರಿಲ್ ೧೯೮೫.

[೩] ವಿ. ದೀಕ್ಷಿತ, “ಚಿತ್ರಗುಪ್ತ: ಭಾರತೀಯ ಭಾಷೆಗಳಿಗೆ ಕಂಪ್ಯೂಟರ್ ಮೇಲೆ ಅಚ್ಚುಕಟ್ಟುವ ಒಂದು ಪದ್ಧತಿ,” *ಅಮೆರಿಕನ್ನಡ*, ಸಂ. ೫, ಪು. ೪೨–೪೩, ಏಪ್ರಿಲ್–ಮೇ ೧೯೮೫.

[೪] ಕ. ರಂಗಾಚಾರ್, “ನನಸಾದ ಕನಸು – ಕನ್ನಡಕ್ಕೊಂದು ಸುಲಭ ಸಾಧ್ಯ ಕಂಪ್ಯೂಟರ್,” *ಅಮೆರಿಕನ್ನಡ*, no. ೪, ಪು. ೪೮–೪೯, ಫೆಬ್ರುವರಿ ೧೯೮೫.

[೫] “ನುಡಿ ತಂತ್ರಾಂಶಗಳು,” ಕನ್ನಡ ಗಣಕ ಪರಿಷತ್ತು, http://www.kagapa.in/kannada/content/ತಂತ್ರಾಂಶಗಳು.

[೬] “ಶಿಷ್ಟತೆ–ಮತ್ತು–ಏಕರೂಪತೆ,” ಕನ್ನಡ ಗಣಕ ಪರಿಷತ್ತು, ಎಪ್ರಿಲ್ ೨೦೧೪.http://www.kagapa.in/kannada/content/ಶಿಷ್ಟತೆ–ಮತ್ತು–ಏಕರೂಪತೆ.

[೭] A. Rathod and A. Joshi, “A Dynamic Text Input scheme for phonetic scripts like Devanagari,” Media Labs, Powai, Mumbai.

[೮] “Kannada Wiki,” https://kn.wikipedia.com.

[೯] “Kannada Kali,” https://kannadakali.com.

[೧೦] V. Dixit, “ಕಂನುಡಿ,” Kannada Reasearch Institute of America, January 2021. https://kannadakali.com/kannudi/kannudi.html.


## ಮೇಲ್ ನುಡಿ

| | |
|---|---|
| ಅಂದಂತೆ | As pronounced/said |
| ಅಕ್ಷರ | Letter in the Kannada alphabet |
| ಅನುಕೂಲ | Convenience |
| ಅನುಕೂಲ ನಿಯಮ | Rule of Convenience |
| ಅನುನಾಸಿಕ | Nasal consonant, fifth member of each of the 5 classes of consonants, ಙ, ಞ ಣ, ನ, and ಮ |
| ಅನುಸ್ವಾರ | Nasal sound represented by sonne ಂ |
| ಅರ್ಕ | Symbol ೯ for sound ರ್ |
| ಅರ್ಕಾವೊತ್ತು | ರೇಫ, symbol ೯ for sound ರ್ |
| ಅರ್ಕೀಕರಣ | Automatic conversion of ರ್ to ಅರ್ಕ |
| ಅಲ್ಪಪ್ರಾಣ | Unaspirated consonant |
| ಅಳತೆಯಂಕ | Measure, parameter |

| | |
|---|---|
| ಅಳಿಸು | Delete |
| ಉತ್ತಮಿಸು | Optimize |
| ಉಲಿ–ಉಲಿಗಟ್ಟಿನ | Phono-syllabic |
| ಉಲಿಗಟ್ಟು | Syllable |
| ಉಲಿದಂತೆ | Phonetic, as pronounced, as you say |
| ಉಲಿಮಿಕ, ಉಲಿಮೆಯಿಕ | Phonetic |
| ಉಲಿಮೆ | Phoneme |
| ಊಡುಗೆ | Input, inputting |
| ಊಡುಬಳಿ | Input method |
| ಊಡುಬಳಿ ಸಂಪಾದಕ | IME Input Method Editor |
| ಊಹಿತ ಸ್ವರ | Default/presumed vowel |
| ಒತ್ತಕ್ಷರ | conjunct |
| ಒತ್ತಿ ಹಿಡಿ ಒತ್ತು ಕೊಡು | OHOK! |
| ಒತ್ತು | 1. secondary form of a consonant; 2. accent |
| ಒತ್ತು ಹಾಕು ಒತ್ತು ಕೊಡು | OHOK! |
| ಕಂಡಂತೆ | as seen (as written) |
| ಕಾಗುಣಿತ ದೋಷ | Syllable word or spelling mistake |
| ಕೀ | Key |
| ಕೀ–ಒತ್ತು | Keystroke |
| ಕೀ–ಮಣೆ | Keyboard |
| ಕೀ–ಮಣೆ ಸಜ್ಜಿಕೆ | Keyboard settings |
| ಗುಣಿತಾಕ್ಷರ | Consonant+vowel, ಕ್, ಕ, ಕಾ, ಕಿ, … |
| ಗೆರೆಮೆ | Grapheme |
| ಚಿತ್ರ ಸಂಸ್ಕರಣೆ | Graphic processing |
| ತಂತ್ರಕಟ್ಟೆ | Technology platform |
| ದನಿ ಊಡುಗೆ | Voice input/inputting |
| ದ್ವಿತ್ವ | Self-conjunct |
| ನಿಸ್ವರ, ನಿಸ್ವನಿ (ನಿಃಸ್ವರ, ನಿಃಸ್ವನಿ) | Null vowel, soundless, ವಿರಾಮ, Symbol ್ |
| ನೆಲೆ–ತಿಳಿವು | Domain knowledge |
| ಬಳಸುಗ | User |
| ಬಳಸುಗ ಸ್ನೇಹಿ | User friendly |
| ಬೆರಳ್ಸವರಿಕೆ | Finger swiping |
| ಮಹಾಪ್ರಾಣ | An aspirated consonant, ಖ,ಫ,ಥ,… |
| ಮುಕ್ತಾಕ್ಷರಶೈಲಿ | open type font |
| ಮೂಲ ಅಕ್ಷರ | Unmodified vowel or Consonant as in the Kannada alphabet |
| ಮೇಲ್ ನುಡಿ | Terminology, ಪರಿಭಾಷೆ |
| ಮೇಲ್ಬರಹ | Superscript |
| ರೂಢಿಗತ | Norm, norm by usage |
| ರೇಫ | Symbol ೯ for sound ರ್ |
| ವರ್ಣಮಾಲೆ | Kannada alphabet |
| ವಿಜಾತಿ ಸಂಯುಕ್ತಾಕ್ಷರ | Conjunct with two different consonants |
| ವಿರಾಮ | Null vowel, soundless vowel, ನಿಸ್ವರ, symbol ್ |
| ವ್ಯಂಜನ | Consonant |
| ಶೂನ್ಯ | ಸೊನ್ನೆ, anusvara, symbol ಂ |
| ಶೂನ್ಯೀಕರಣ | Automatic conversion of ಅನುನಾಸಿಕ to ಶೂನ್ಯ |
| ಸಂಯುಕ್ತಾಕ್ಷರ | Conjunct |
| ಸಜಾತಿ ಸಂಯುಕ್ತಾಕ್ಷರ | ದ್ವಿತ್ವ, self conjunct |
| ಸಾಮಾನ್ಯ | Normal, common |
| ಸೊನ್ನೆ | ಶೂನ್ಯ, anusvara, symbol ಂ |
| ಸ್ವರ | Vowel |
| ಹಿಂದಳಿಸು | Backspace |